೮) ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಹೆಚ್‌ಎಫ್‌ಎಫ್ ೧೭ ಎಫ್‌ಎಫ್‌ಐ ೮೩, ದಿನಾಂಕ ೮ನೇ ಏಪ್ರಿಲ್ ೧೯೮೮ರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ೧೯೬೫ರ ನಿಯಮ ೭೦ ತಿದ್ದುಪಡಿ ಮಾಡಿ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆ ಮಾಡುವ ಬಗ್ಗೆ ಸುಳಿವು ನೀಡಿ ಹಿಡಿಯಲು ಸಹಕರಿಸಿದ ಅರಣ್ಯ ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ಕಳ್ಳಸಾಗಾಣಿಕೆಯಲ್ಲಿ ಹಿಡಿದ ಮಾಲಿನ ಮೊತ್ತದ ಶೇಕಡಾ ೧೫ ರಷ್ಟನ್ನು ಗರಿಷ್ಟ ಮಿತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೨,೦೦೦-೦೦ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೫,೦೦೦-೦೦ ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೧೦,೦೦೦-೦೦ ರೂಪಾಯಿ ಗಳವರೆಗೆ ಪ್ರೋತ್ಸಾಹ ಧನ ಕೊಡಲು ಕಾನೂನಿನಲ್ಲಿ ಅಧಿಕಾರ ಕೊಡಲಾಗಿದೆ ಮತ್ತು ಹಣದ ರೂಪದಲ್ಲಿ ಪಾರಿತೋಷಕ (ರಿವಾರ್ಡ್) ಕೊಡಲು ಉದ್ದೇಶಿಸಿದೆ.

೯) ಅಕ್ರಮ ಕಡಿತಲೆಯನ್ನು ತಡೆಗಟ್ಟಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕರ್ನಾಟಕ ಅರಣ್ಯ ಕಾಯಿದೆಯನ್ನು ತಿದ್ದುಪಡಿ ಮಾಡಿ ಗಂಧದ ಮರದ ಕಳ್ಳಸಾಗಾಣಿಕೆ ಮತ್ತಿತರ ಅರಣ್ಯ ಸಂಪತ್ತನ್ನು ಮತ್ತು ಕಳ್ಳಸಾಗಾಣಿಕೆಯಲ್ಲಿ ನಿರತವಾದ ವಾಹನಗಳನ್ನು ಸರ್ಕಾರಕ್ಕೆ ಮುಟ್ಟು ಗೋಲು ಹಾಕುವಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕರ್ನಾಟಕ ಅರಣ್ಯ ಕಾಯಿದೆ ೧೯೬೫ರ ೭೧(ಎ) ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರ ನೀಡಲಾಗಿದೆ.

೧೦) ಇದರ ಹೊರತಾಗಿ ಗಂಧದ ಮರದ ಅಪರಾಧ ನಿಯಂತ್ರಿಸಲು ದಂಡ ಮತ್ತು ಶಿಕ್ಷೆಯನ್ನು ಹೆಚ್ಚಿಸಲಾಗಿದೆ. ಅಪರಾಧಿಗಳ ಮೇಲೆ ಉಗ್ರಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಮೊಕದ್ದಮೆಗಳಲ್ಲಿ ಒಂದನೇ ಬಾರಿಯಾದರೆ ಮೂರು ವರ್ಷ ಸಜಾ ಮತ್ತು ೧೦,೦೦೦ ರೂಪಾಯಿಗೆ ಕಡಿಮೆ ಇಲ್ಲದಂತೆ ಕಾನೂನಿನನ್ವಯ ನ್ಯಾಯಾಲಯದಲ್ಲಿ ದಂಡ ವಿಧಿಸಬಹುದು. ಮೊಕದ್ದಮೆ ಒಂದು ಸಲಕ್ಕಿಂತ ಮೇಲ್ಪಟ್ಟಿದ್ದಲ್ಲಿ ಐದು ವರ್ಷ ಸಜಾ ಮತ್ತು ೨೫,೦೦೦ ರೂಪಾಯಿಗಳಿಗಿಂತ ಕಡಿಮೆ ಇಲ್ಲದಂತೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

೧೧) ಸರ್ಕಾರವು ಕಳ್ಳಸಾಗಾಣಿಕೆಯನ್ನು ತಡೆಯಲು ಒಂದ ವಿಶೇಷ ಪೋಲೀಸ್ ದಳ ವನ್ನು ಡಿ.ಐ.ಜಿ. ಆಫ್ ಪೋಲೀಸ್ ಅವರ ನೇತೃತ್ವದಲ್ಲಿ ಸ್ಥಾಪಿಸಿದೆ.

೧೨) ಇಲಾಖಾ ಸಿಬ್ಬಂದಿಯನ್ನು ಶೀಘ್ರವಾಗಿ ಸಂಪರ್ಕಿಸಲು ಈಗಿರುವ ನಿಸ್ತಂತು ಉಪಕರಣವನ್ನು ಇಡೀ ರಾಜ್ಯಕ್ಕೆ ಹಬ್ಬುವ ಯೋಜನೆ ಸರ್ಕಾರಕ್ಕೆ ಇದೆ.

## ಖಾಸಗಿ ಭೂಮಿಯಲ್ಲಿ ಮರ ಕಡಿಯಲು ಅನುಮತಿ ನೀಡಿರುವ ಬಗ್ಗೆ

೧೨೭೦(೨೬೫೩) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೆಗ್ಗಡದೇವನಕೋಟೆ ತಾಲ್ಲೂಕಿನ ಕಂಚರಿಕೆ ಹೋಬಳಿಯಲ್ಲಿ ಖಾಸಗಿಯವರಿಗೆ ಜಮೀನು ಗಳಲ್ಲಿ ಮರ ಕಡಿಯಲು ಅನುಮತಿ ನೀಡಲಾಗಿದೆಯೇ? (ಮಾಲೀಕರ ಹೆಸರು, ಪ. ಸಂಖ್ಯೆ ವಿವರ ನೀಡುವುದು)

ಆ) ಹಾಗಿದ್ದಲ್ಲಿ ಯಾವಾಗ ಅನುಮತಿ ನೀಡಲಾಯಿತು?

ಇ) ಎಷ್ಟು ಎಕರೆ ಭೂಮಿಯಲ್ಲಿ ಮರ ಕಡಿಯಲು ಅನುಮತಿ ನೀಡಲಾಗಿದೆ?

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

| ಕ್ರಮ ಸಂಖ್ಯೆ | ಮಾಲೀಕರ ಹೆಸರು | ಪರವಾನಗಿ ಸಂಖ್ಯೆ |
|---|---|---|
| | ಶ್ರೀಯುತರು :— | |
| ೧) | ಎಂ. ಎನ್. ನಂಜಪ್ಪ, ಮಟಕೆರೆ ಗ್ರಾಮ | ೪ |
| ೨) | ಮಹಮದ್ ಖಾಸಿಮ್, ಕೂಡಿಗೆ ಗ್ರಾಮ | ೧ |
| ೩) | ಟಿ. ಕೆ. ಜೋಸ್, ನಡಹಡಿ ಗ್ರಾಮ | ೧೫ |
| ೪) | ಕೆ. ಹನುಮಂತಯ್ಯ, ಕುರ್ಣಿಗಾಲ | ೧ |
| ೫) | ಕೆಂಪಯ್ಯ, ಕುರ್ಣಿಗಾಲ | ೨ |

ಈ ದಿನಾಂಕಗಳಂದು ಅನುಕ್ರಮವಾಗಿ ಅನುಮತಿ ನೀಡಲಾಗಿದೆ.

ಆ) ೧) ೧೬-೩-೮೭
೨) ೨೫-೫-೮೭
೩) ೨೫-೧-೮೮ ಮತ್ತು ೫-೨-೮೮
೪) ೧೦-೭-೮೭
೫) ೨೩-೫-೮೮

ಇ)

| | ವಿಸ್ತೀರ್ಣ | | ಸರ್ವೆ ನಂ. |
|---|---|---|---|
| ೧) | ಎಕರೆ | ೪-೦೦ | ೪೦/೨೦ |
| ೨) | ಎಕರೆ | ೪-೦೦ | ೧೨ |
| ೩) | ಎಕರೆ | ೨೨-೨೭ ಗುಂಟೆ | ೧ ಮತ್ತು ೪ ರಿಂದ ೧೧ |
| ೪) | ಎಕರೆ | ೭-೨೦ | ೯ |
| ೫) | ಎಕರೆ | ೮-೨೮ | ೧೩ |

ಗುಂಟೆ ಅನುಕ್ರಮವಾಗಿ

## ಮರಗಳ ಸಾಗಣೆಯಲ್ಲಿ ದಾಖಲಾದ ಮೊಕದ್ದಮೆಗಳು

೧೨೭೧(೨೧೫೧) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

೧) ದಕ್ಷಿಣ ಕನ್ನಡ ಜಿಲ್ಲೆಯ ದಬ್ರಿ ವಲಯದಲ್ಲಿ ಕಳೆದ ಮೂರು ವರ್ಷಗಳಿಂದ ಕಳ್ಳ ಮರಗಳ ಸಾಗಾಣಿಕೆಯಲ್ಲಿ ದಾಖಲಾತಿ ಮೊಕದ್ದಮೆಗಳೆಷ್ಟು? (ವಾಹನಗಳ ಸ್ವಾಧೀನಪಡಿಸಿಕೊಂಡ ದಿನಾಂಕ ಮತ್ತು ವಿವರ ನೀಡುವುದು)

೨) ಈ ಪೈಕಿ ವಿಲೇವಾರಿ ಆದ ಮೊಕದ್ದಮೆಗಳೆಷ್ಟು? (ಬಿಡುಗಡೆ ಮಾಡಲಾದ ವಾಹನಗಳ ಸಂಖ್ಯೆ ಎಷ್ಟು? ತಾರೀಖು ವಿವರ ನೀಡುವುದು)

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

೧) ಕುಂದಾಪುರ ಅರಣ್ಯ ವಿಭಾಗದ ಹೆಬ್ರಿ ವಲಯದಲ್ಲಿ ಎಂಟು (೮) ಮೊಕದ್ದಮೆಗಳನ್ನು ದಾಖಲು ಮಾಡಲಾಗಿ, ಇವುಗಳ ವಿವರ ಈ ಕೆಳಗಿನಂತಿದೆ.

| | ವಾಹನ ಸಂಖ್ಯೆ | ಸ್ವಾಧೀನಪಡಿಸಿಕೊಂಡ ದಿನಾಂಕ |
|---|---|---|
| ೧) | ಟೆಂಪೊ : ಎಂಇಜಿ : ೭೫೦೧ | ೯-೧೨-೧೯೮೫ |
| ೨) | ಟೆಂಪೊ ಸಿಬಿಎಕ್ಸ್ ೯೧೨೯ | ೨೧-೬-೧೯೮೬ |
| ೩) | ಟೆಂಪೊ ಸಿಎನ್‌ಜಿ ೯೫೭೬ | ೩೦-೮-೧೯೮೬ |
| ೪) | ಟೆಂಪೊ ಸಿಎನ್‌ಎಸ್ ೬೫೮೯ | ೨೫-೨-೧೯೮೭ |
| ೫) | ಟೆಂಪೊ ಸಿಎನ್‌ಜಿ ೮೯೫೧ | ೭-೮-೧೯೮೭ |
| ೬) | ಟೆಂಪೊ ಸಿಎನ್‌ಎಕ್ಸ್ ೭೮೮೯ | ೨೬-೮-೧೯೮೭ |
| ೭) | ಜೀಪು ಎಂವೈಕೆ ೫೩೧೦ | ೨೯-೮-೧೯೮೭ |
| ೮) | ಟೆಂಪೊ ಎಂಇಜಿ ೭೯೬೬ | ೪-೧೨-೧೯೮೭ |